ಪಿ.ಡಬ್ಲ್ಯು.1

(ಇಂದು ದಿನಾಂಕ 30-03-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಡಿ.ಎಸ್.ಬಿ. ವಕೀಲರಿಂದಃ**

ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಸರ್ವೇ ನಕಾಶೆಯನ್ನು ಪಡೆದುಕೊಂಡು ನನ್ನ ಪರ ವಕೀಲರಿಗೆ ನೀಡಿರುವುದಿಲ್ಲ. ನಾನು ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಸರ್ವೆ ನಕಾಶೆಯನ್ನು ಪಡೆದುಕೊಂಡಿರುವುದಿಲ್ಲ. ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ನಾನು ದಾವಾ ಸ್ವತ್ತುಗಳ ಪಹಣಿ ಪತ್ರಿಕೆಯನ್ನು ಪರಿಶೀಲಿಸಿದ್ದು, ಅದರ ಬಗ್ಗೆ ನನಗೆ ಮಾಹಿತಿ ಇರುತ್ತದೆ. ದಾವಾ ಸ್ವತ್ತುಗಳ ಪಹಣಿ ಪತ್ರಿಕೆಯಲ್ಲಿ ದಾರಿಯ ಸಲುವಾಗಿ ಅಥವಾ ನೀರು ಹರಿಯುವ ಕಾಲುವೆಯ ಸಲುವಾಗಿ ಖರಾಬು ಇರುವ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸಾಕ್ಷಿಯು ಸ.ನಂ. 316/3 ರಲ್ಲಿ ಆ ಬಗ್ಗೆ ನಮೂದಿಸಲಾಗಿದೆ ಎಂದು ನುಡಿಯುತ್ತಾರೆ. ಸ.ನಂ. 316/3 ರಲ್ಲಿ ಇರುವ ಖರಾಬನ್ನು ನೀರು ಹರಿಯವ ಉದ್ದೇಶಕ್ಕಾಗಿ ಬಿಡಲಾಗಿರುತ್ತದೆ. ಸ.ನಂ. 316/3 ನಮ್ಮಗಳ ಕುಟುಂಬಕ್ಕೆ ಸೇರಿದ್ದಾಗಿರುತ್ತದೆ. ಸ.ನಂ. 316/3 ಪ್ರತಿವಾದಿಗಳಿಗೆ ಸಂಬಂಧಪಟ್ಟ ಸ್ವತ್ತು ಆಗಿರುವುದಿಲ್ಲ.

ದಾವಾ ಸ್ವತ್ತುಗಳಲ್ಲಿ ಕಾಣಿಸಿರುವ ಸ್ವತ್ತುಗಳ ಪೈಕಿ ಪ್ರತಿವಾದಿಗಳಿಗೆ ಸೇರಿದ ಸ್ವತ್ತುಗಳಲ್ಲಿ ಯಾವುದೇ ರೀತಿಯ ಖರಾಬು ಇರುವುದಿಲ್ಲ. ಪ್ರತಿವಾದಿಗಳು ತಮ್ಮ ಹಿಸ್ಸೆಯ ಸ್ವತ್ತನ್ನು ಬೇಲಿ ಹಾಗೂ ಪಾಗಾರ ಹಾಕಿಕೊಂಡು ಸಾಗುವಳಿ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸಾಕ್ಷಿಯು ಬೇಲಿ ಹಾಗೂ ಪಾಗಾರ ಇರುತ್ತದೆ, ಆದರೆ ಅದೇ ರೀತಿಯಾಗಿ ಅನಾದಿಕಾಲದಿಂದಲೂ ಸದರಿ ಪ್ರದೇಶವನ್ನು ಓಡಾಡಲು ಬಳಸಲಾಗುತ್ತಿದೆ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ಫೋಟೋಗಳು ಸ.ನಂ. 315/2, 314/4 ಮತ್ತು 314/5 ಕ್ಕೆ ಸಂಬಂಧಪಟ್ಟದ್ದಾಗಿರುತ್ತದೆ. ಫೊಟೋಗಳನ್ನು ಯಾವ ಇಸವಿಯಲ್ಲಿ ತೆಗೆಯಲಾಗಿರುತ್ತದೆ ಎಂದು ಹೇಳಲು ಆಗುವುದಿಲ್ಲ. ಫೊಟೋಗಳನ್ನು ನಾನೇ ನನ್ನ

ಮೊಬೈಲ್ ಮೂಲಕ ತೆಗೆದಿರುತ್ತೇನೆ. ನಾನು ಹಾಜರುಪಡಿಸಿರುವ ಫೊಟೋಗಳು ದಾವಾ ಸ್ವತ್ತಿಗೆ ಸಂಬಂಧಪಟ್ಟದಾಗಿರುವುದಿಲ್ಲ ಎಂದರೆ ಸರಿಯಲ್ಲ.

ನ್ಯಾಯಾಲಯದ ಮೂಲಕ ನಿಯೋಜನೆಗೊಂಡ ನಿಯೋಗಿಗಳು ಸ್ಥಳ ಪರಿಶೀಲನೆಗೆ ಸ್ಥಳಕ್ಕೆ ಬಂದಾಗ ಉಭಯ ಪಕ್ಷಗಾರರು ಹಾಜರಿದ್ದರು. ನಿಯೋಗಿಯವರು ಸ್ಥಳದಲ್ಲಿದ್ದ ಪಕ್ಷಗಾರರಿಂದ ಅವಶ್ಯಕ ಮಾಹಿತಿಯನ್ನು ಪಡೆದುಕೊಂಡು ವರದಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸ್ಥಳಕ್ಕೆ ನಿಯೋಗಿಯವರು ಬಂದ ಸಂದರ್ಭದಲ್ಲಿ ನಾವು ಕೆಲವೊಂದು ಮಾಹಿತಿಗಳನ್ನು ಪರಿಶೀಲಿಸಿ ನಮೂದಿಸುವಂತೆ ಮೌಖಿಕವಾಗಿ ತಿಳಿಸಿರುತ್ತೇವೆ, ಅದರೆ ಲಿಖಿತವಾಗಿ ನೀಡಿರುವುದಿಲ್ಲ. ಲಿಖಿತವಾಗಿ ನೀಡಲು ನಮಗೆ ತೊಂದರೆ ಇರಲಿಲ್ಲ. ನ್ಯಾಯಾಲಯದ ನಿಯೋಗಿಯವರು ಸ್ಥಳ ಪರಿಶೀಲನೆ ಮಾಡಿ ವಾಸ್ತವಾಂಶವನ್ನು ಪರಿಶೀಲಿಸಿ ಅದರಂತೆ ವರದಿ ನೀಡಿದ್ದು, ಅದು ಸೂಕ್ತವಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಪ್ರಸ್ತುತ ದಾವೆಯಲ್ಲಿ ಸುಳ್ಳು ಪ್ರತಿಪಾದನೆ ಮಾಡಿದ್ದು, ನನ್ನ ಪ್ರತಿಪಾದನೆಗೆ ಪೂರಕವಾಗುವ ರೀತಿಯಲ್ಲಿ ನಿಯೋಗಿಯವರು ವರದಿಯಲ್ಲಿ ನಮೂದಿಸದ ಕಾರಣ ವರದಿ ಸರಿ ಇರುವುದಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತುಗಳಲ್ಲಿ ನಮೂದಿಸಿರುವ ಸ. ನಂ.ಗಳ ಪೈಕಿ ನಮಗೆ ಸೇರಿದ ಸ.ನಂ. ಹಾಗೂ ಪ್ರತಿವಾದಿಗಳಿಗೆ ಸೇರಿದ ಸ.ನಂ. ಹೇಳಲು ಆಗುತ್ತದೆ. ದಾವಾ ಅನುಸೂಚಿಯಲ್ಲಿ ನಮೂದಿಸಿರುವ ಸ್ವತ್ತುಗಳ ಪೈಕಿ ಸ.ನಂ. 316/3 ರಲ್ಲಿನ ಸ್ವತ್ತು ನನ್ನ ಹಾಗೂ 2 ಮತ್ತು 3 ನೇ ವಾದಿಗಳ ಜಂಟಿ ಸ್ವಾಧೀನಾನುಭವಕ್ಕೆ ಸೇರಿದ ಸ್ವತ್ತು ಆಗಿರುತ್ತದೆ. ಸ.ನಂ. 316/3 ರಲ್ಲಿ ನಮ್ಮನ್ನು ಹೊರತುಪಡಿಸಿ ನಿ.ಪಿ. 7 ರಲ್ಲಿ ನಮೂದಿಸಿರುವ ಇತರ ವ್ಯಕ್ತಿಗಳಿಗೂ ಸಹ ಸಾಮೂಹಿಕ ಹಕ್ಕು ಇರುತ್ತದೆ ಎಂದರೆ ಸರಿ. ಸ.ನಂ. 316/3 ರಿಂದ 314/1, 313/1, 313/2, 313/3, 314/8 ರಲ್ಲಿನ ಸ್ವತ್ತುಗಳಿಗೆ ಹೋಗಲು ಪ್ರತಿವಾದಿಯ ಸ್ವತ್ತುವಿನಲ್ಲಿ ಅನಾದಿಕಾಲದಿಂದ ದಾರಿ ಇದ್ದು, ಆ ಬಗ್ಗೆ ಹಕ್ಕನ್ನು ಕೇಳಿ ಪ್ರಸ್ತುತ ದಾವೆ ಸಲ್ಲಿಸಿರುತ್ತೇವೆ. ಸ.ನಂ. 315/1,

314/1, 315/2, 313/1, 313/2, 313/3 ರಲ್ಲಿ ನಮಗೆ ಸ.ನಂ. 316/3 ರಿಂದ ನಮಗೆ ಸೇರಿದ ಇತರ 5 ಸ್ವತ್ತುಗಳಿಗೆ ಹೋಗಲು ದಾರಿ ಇದ್ದು, ಆ ಬಗ್ಗೆ ಪ್ರಸ್ತುತ ದಾವೆಯನ್ನು ಸಲ್ಲಿಸಿರುತ್ತೇವೆ.

1 ಮತ್ತು 2 ನೇ ಪ್ರತಿವಾದಿಗೆ ಸ.ನಂ 315/2 ರಲ್ಲಿ ಹಕ್ಕಿದ್ದು, ಅದರಲ್ಲಿ ನಾವು ದಾರಿಯ ಹಕ್ಕನ್ನು ಕೇಳಿರುತ್ತೇವೆ. 3 ಮತ್ತು 4 ನೇ ಪ್ರತಿವಾದಿಗಳಿಗೆ ಸ.ನಂ 314/2, 314/3, ಮತ್ತು 314/4 ರಲ್ಲಿ ಹಕ್ಕಿದ್ದು, ಅದರಲ್ಲಿಯೂ ನಾವು ದಾರಿಯ ಹಕ್ಕನ್ನು ಕೇಳಿರುತ್ತೇವೆ. 5 ನೇ ಪ್ರತಿವಾದಿಗೆ ಸೇರಿದ ಸ್ವತ್ತಿನ ಸ.ನಂ. ನನಗೆ ಹೇಳಲು ನೆನಪಾಗುತ್ತಿಲ್ಲ. 5 ನೇ ಪ್ರತಿವಾದಿಗೆ ಸೇರಿದ ಸ್ವತ್ತಿನಲ್ಲಿ ನಾನು ದಾರಿಯ ಹಕ್ಕನ್ನು ಕೇಳಿರುವುದಿಲ್ಲ. 5 ನೇ ಪ್ರತಿವಾದಿಗೆ ಸೇರಿದ ಸ್ವತ್ತಿನಲ್ಲಿ 2 ಮತ್ತು 3 ನೇ ವಾದಿಗಳಿಗೆ ದಾರಿಯ ಹಕ್ಕು ಇದ್ದು, ಅವರು ಹಕ್ಕನ್ನು ಕೇಳಿರುತ್ತಾರೆ. 6 ರಿಂದ 8 ನೇ ಪ್ರತಿವಾದಿಗಳು 1 ಮತ್ತು 2 ನೇ ಪ್ರತಿವಾದಿಗಳ ಸಹೋದರಿಯರಿದ್ದು, 6 ರಿಂದ 8 ನೇ ಪ್ರತಿವಾದಿಗಳಿಗೆ ಸೇರಿದ ಸ್ವತ್ತಿನ ಸ.ನಂ ನನಗೆ ಹೇಳಲು ಬರುವುದಿಲ್ಲ. ಸಾಕ್ಷಿಯು ಮುಂದುವರೆದು 1, 2 ಮತ್ತು 6 ರಿಂದ 8 ನೇ ಪ್ರತಿವಾದಿಯ ತಂದೆ ಮೃತಪಟ್ಟ ನಂತರ ಅವರುಗಳು ಸ್ವತ್ತುಗಳನ್ನು ಹೇಗೆ ವ್ಯವಸ್ಥೆ ಮಾಡಿಕೊಂಡಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. 9 ನೇ ಪ್ರತಿವಾದಿಗೆ ಸೇರಿದ ಸ್ವತ್ತಿನ ಸಂಖ್ಯೆ 316/9 ಆಗಿದ್ದು, ಅವರಿಗೆ ಸೇರಿದ ಸ್ವತ್ತಿನಲ್ಲಿ ನಾವು ದಾರಿಯ ಹಕ್ಕನ್ನು ಕೇಳಿರುವುದಿಲ್ಲ, ಅದರೆ 9 ನೇ ಪ್ರತಿವಾದಿಗೆ ಸೇರಿದ ಸ್ವತ್ತಿನಲ್ಲಿ ನೀರಿನ ಪೈಪನ್ನು ಅಳವಡಿಸಲಾಗಿದ್ದು, ಅದಕ್ಕೆ ಸಂಬಂಧಪಟ್ಟಂತೆ ಪರಿಹಾರವನ್ನು ಕೇಳಿರುತ್ತೇವೆ. 9 ನೇ ಪ್ರತಿವಾದಿಯ ಸ್ವತ್ತಿನಲ್ಲಿ ಇರುವ ನೀರಿನ ಪೈಪನ ಮೂಲಕ ಸರಬರಾಜಾಗುವ ನೀರನ್ನು ನಮ್ಮ ಗೃಹೋಪಯೋಗಿಗಳಿಗೆ ಹಾಗೂ ಕೃಷ್ಟಿ ಚಟುವಟಿಕೆಗಳಿಗೆ ಬಳಸುತ್ತೇವೆ.

ಸ.ನಂ 316/9 ರ ಪಹಣಿ ಪತ್ರಿಕೆಯನ್ನು ದಾವೆಯಲ್ಲಿ ನಾನು ಹಾಜರುಪಡಿಸಿರುವುದಿಲ್ಲ. ಸ.ನಂ 316/9 ರಲ್ಲಿ 1 ರಿಂದ 8 ನೇ ಪ್ರತಿವಾದಿಗಳಿಗೆ ಯಾವುದೇ ಹಕ್ಕು ಇರುವುದಿಲ್ಲ. ದಾವೆಯನ್ನು ಸಲ್ಲಿಸುವ ಸಂದರ್ಭದಲ್ಲಿ ಸ.ನಂ 316/9 ರಲ್ಲಿ ಪೈಪ್ ಲೈನ್ ಹಾಯ್ದಿರುವ ಬಗ್ಗೆ ವಕೀಲರಿಗೆ ಮಾಹಿತಿಯನ್ನು ನೀಡಿರುತ್ತೇನೆ.

**(ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ